
# ಅಂಧರ ಬಾಳಿಗೆ ಬೆಳಕು ಕಾರ್ನಿಯಾ ಕಸಿ



ಅಂಧತ್ವ ನಿವಾರಣೆಗೆ ಕಾರ್ನಿಯಾ ಕಸಿ ವರದಾನ. ಕಣ್ಣುದಾನ ಮಾಡುವುದರಿಂದ ದೃಷ್ಟಿ ಕಳೆದುಕೊಂಡವರ ಬಾಳಿನಲ್ಲಿ ಬೆಳಕು ಮೂಡಿಸಬಹುದು. ಆದರೆ ದೃಷ್ಟಿದಾನದ ಬಗ್ಗೆ ಜನರಲ್ಲಿ ಅರಿವಿನ ಕೊರತೆ ಇರುವುದರಿಂದ ನಮ್ಮಲ್ಲಿ ಕಣ್ಣುದಾನ ಮಾಡುವವರ ಸಂಖ್ಯೆ ಕಡಿಮೆ.

■ ಉಮಾ ವೇಣೂರು

ಬೆಂಗಳೂರಿನ ಆರು ವರ್ಷದ ಸೀಮಾ ಹುಟ್ಟು ಕುರುಡಿ ಏನಲ್ಲ. ಆಟವಾಡುವಾಗ ಕಣ್ಣುಗಳಿಗೆ ಏನೋ ವಿಷಕಾರಿ ಅಂಶ ತಗುಲಿ ಎರಡು ಕಣ್ಣುಗಳ ದೃಷ್ಟಿಯನ್ನೂ ಕಳೆದುಕೊಂಡಿದ್ದಳು. ಅದೇ ಸಮಯಕ್ಕೆ ಆಕೆಯ 58 ವರ್ಷದ ಅಜ್ಜಿ ತೀರಿಕೊಂಡರು. ತಕ್ಷಣ ಅಜ್ಜಿಯ ಕಣ್ಣುಗಳ ಕಾರ್ನಿಯಾವನ್ನು ಪಡೆದು ಸೀಮಾ ಕಣ್ಣುಗಳಿಗೆ ಕಸಿ ಮಾಡಲಾಯಿತು. ಈಗ ಸೀಮಾ ಬಾಳಲ್ಲಿ ಮತ್ತೆ ಬೆಳಕು ಮೂಡಿದೆ.

ಅಂಧರ ಬಾಳಿಗೆ ಬೆಳಕು ನೀಡುವುದು ಪುಣ್ಯದ ಕೆಲಸ ಎಂದು ನಂಬಿದವರು 60ರ ಹರೆಯದ ಮಹದೇವಪ್ಪನವರು. ಆದರೆ ಅವರಿಗೆ ಕಣ್ಣುಗಳ ದಾನ ಮಾಡುವುದು ಎಲ್ಲಿ ಹೇಗೆ ಎಂಬ ವಿಷಯ ಗೊತ್ತಿರಲಿಲ್ಲ. ನೇತ್ರವೈದ್ಯರ ಸಲಹೆ ಮೇರೆಗೆ ಮಹದೇವಪ್ಪ ತಮ್ಮ ಎರಡೂ ಕಣ್ಣುಗಳನ್ನು ದಾನ ಮಾಡುವ ಸಂಕಲ್ಪ ಮಾಡಿದರು. ಅಂಧ ವಿದ್ಯಾರ್ಥಿಯೊಬ್ಬನಿಗೆ ಇದನ್ನು ಕಸಿ ಮಾಡಿದ್ದು ಆತ ದೃಷ್ಟಿಭಾಗ್ಯ ಪಡೆಯುವಂತಾಯಿತು.

ಕಣ್ಣುಗಳು ಬಹುಮುಖ್ಯ ಹಾಗೂ ಸೂಕ್ಷ್ಮ ಅಂಗ. ಇದರ ಆರೋಗ್ಯವೂ ಬಹಳ ಮುಖ್ಯವಾದ ಕಾರಣ ಆಗಾಗ್ಗೆ ಕಣ್ಣುಪರೀಕ್ಷೆ ಮಾಡಿಸಿಕೊಳ್ಳಬೇಕು. ಮರಣ ನಂತರ ಕಣ್ಣುಗಳನ್ನು ಇತರರಿಗೆ ದಾನ ಮಾಡುವುದರಿಂದ ದೃಷ್ಟಿಹೀನರ ಬದುಕಲ್ಲಿ ಜ್ಯೋತಿ ಬೆಳಗಿದಂತಾಗುವುದು.

ಕುರುಡುತನಕ್ಕೆ ಹಲವು ಕಾರಣಗಳು. ಕಣ್ಣಿನ ಪಾರದರ್ಶಕ ಕಪ್ಪು ಪರದೆಯಲ್ಲಿನ ದೋಷ (ಕಾರ್ನಿಯಾ), ಕ್ಯಾಟರಾಕ್ಟ್, ರಿಫ್ರ್ಯಾಕ್ಟಿವ್ ಎರರ್, ಗ್ಲಾಕೋಮ, ರೆಟಿನಾದಲ್ಲಿ ತೊಂದರೆಗಳು, ವಯೋಸಹಜ, ಮಧುಮೇಹ, ಆಕಸ್ಮಿಕವಾಗಿ ಕಣ್ಣಿಗೆ ಕಲ್ಲು, ಚೂಪಾದ ವಸ್ತುಗಳು, ರಾಸಾಯನಿಕಗಳು, ವಿಷಕಾರಕ ಅಂಶಗಳು ತಗಲುವುದರಿಂದ ಶಾಶ್ವತ ಹಾಗೂ ಕೆಲವೊಮ್ಮೆ ಭಾಗಶಃ ದೃಷ್ಟಿದೋಷ ಸಂಭವಿಸಬಹುದು. ಇಂಥವರಿಗೆ ದೃಷ್ಟಿದಾನದ ಮೂಲಕ ಕಣ್ಣು ಪಡೆದು ಕಸಿ ಮಾಡಿದರೆ ಎಲ್ಲರಂತೆಯೇ ಕಣ್ಣು ಕಾಣಿಸಬಹುದು.

‘ಭಾರತದಲ್ಲಿ ಸುಮಾರು 80 ಲಕ್ಷ ಮಂದಿ ಅಂಧರಿದ್ದಾರೆ. ಇವರಲ್ಲಿ ಸುಮಾರು 18 ಲಕ್ಷಕ್ಕೂ ಹೆಚ್ಚು ಮಂದಿ ಕಾರ್ನಿಯಾ ದೋಷದಿಂದ ಬಳಲುತ್ತಿದ್ದಾರೆ. ಕಾರ್ನಿಯಾ ಸಮಸ್ಯೆಯಿಂದ ಬಳಲುವವರಿಗೆ ಕಸಿ ಮಾಡಿಸಿಕೊಳ್ಳುವುದು ವರದಾನವಾಗಿ ಪರಿಣಮಿಸುತ್ತದೆ. ಆದರೆ ನಮ್ಮಲ್ಲಿ ಅರಿವಿನ ಕೊರತೆಯಿಂದ ಕಾರ್ನಿಯಾ ದಾನ ಮಾಡುವವರ ಸಂಖ್ಯೆ ತೀರಾ ಕಡಿಮೆ. ಹೀಗಾಗಿ ದೇಶದಲ್ಲಿ ಅಂಧರ ಸಂಖ್ಯೆ ಹೆಚ್ಚುತ್ತಿದೆ; ದಾನಿಗಳ ಸಂಖ್ಯೆ ಕ್ಷೀಣಿಸುತ್ತಿದೆ’ ಎಂದು ಖೇದ ವ್ಯಕ್ತಪಡಿಸುತ್ತಾರೆ ಬೆಂಗಳೂರಿನ ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ನೇತ್ರತಜ್ಞ ಡಾ.ರಘು ನಾಗರಾಜ್.

‘ನೇತ್ರದಾನವನ್ನು ಯಾರು ಬೇಕಾದರೂ ಮಾಡಬಹುದು. ಇದಕ್ಕೆ ವಯಸ್ಸಿನ ನಿರ್ಬಂಧವಿಲ್ಲ. ರಕ್ತದ ಗುಂಪಿನ ಹೊಂದಾಣಿಕೆಯೂ ಬೇಕಾಗಿಲ್ಲ. ಮಹಿಳೆಯರೂ ದಾನ ಮಾಡಬಹುದು. ಜೀವನಶೈಲಿ ಸಮಸ್ಯೆಯಿಂದ ಬಳಲುತ್ತಿದ್ದವರೂ ಮರಣ ನಂತರ ದೃಷ್ಟಿದಾನ ಮಾಡಬಹುದು. ಸಣ್ಣ ಮಕ್ಕಳ ಕಣ್ಣುಗಳನ್ನು ಹರೆಯದ ವ್ಯಕ್ತಿಗಳಿಗೂ ಕಸಿ ಮಾಡಬಹುದು, ವಯಸ್ಸಾದವರ ಕಣ್ಣುಗಳನ್ನು ಮಕ್ಕಳಿಗೂ ಕಸಿ ಮಾಡಬಹುದು. ಇದರಿಂದ ಯಾವುದೇ ಸಮಸ್ಯೆ ಉದ್ಭವಿಸದು’ ಎಂದು ವಿವರ ನೀಡುತ್ತಾರೆ ಡಾ.ರಘು.

‘ಮರಣ ಸಂಭವಿಸಿದ ಎಂಟು ಗಂಟೆಗಳೊಳಗೆ ಕಣ್ಣುಗಳನ್ನು ದಾನ ಮಾಡಬೇಕು. ಕಣ್ಣುಗಳನ್ನು ಸಂರಕ್ಷಿಸಿ ಇಡಲು ‘ಐ ಬ್ಯಾಂಕ್’ (ನೇತ್ರ ಭಂಡಾರ)ಗಳಿವೆ. ದಾನ ಮಾಡಲು ಇಚ್ಛಿಸುವವರು ಐ ಬ್ಯಾಂಕ್‌ಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನೇತ್ರ ಭಂಡಾರದಿಂದ ಪಡೆದ ಪತ್ರವನ್ನು ಮನೆಯವರ ಬಳಿ ಅಥವಾ ಸ್ನೇಹಿತರ ಬಳಿ ನೀಡಿ ಸಹಿ ಹಾಕಿ ಕೊಡಬೇಕು. ಮರಣ ನಂತರ ಐ ಬ್ಯಾಂಕ್ ಅಥವಾ ನೇತ್ರ ಆಸ್ಪತ್ರೆಗೆ ಕರೆ ಮಾಡಿದರೆ ತಜ್ಞ ವೈದ್ಯರ ತಂಡ ಮನೆಗೇ ಬಂದು ಕಣ್ಣುಗಳನ್ನು ಪಡೆದುಕೊಳ್ಳುವರು. ಈ ಕಣ್ಣುಗಳನ್ನು ಅಗತ್ಯವಿರುವವರಿಗೆ ಕಸಿ ಮಾಡುವ ಮಾಡುವ ದೃಷ್ಟಿಯನ್ನು ಮರಳಿ ಪಡೆಯಲು ಸಾಧ್ಯ’ ಎಂದು ಹೇಳುತ್ತಾರೆ ಈ ವೈದ್ಯರು.

## ಶ್ರೀಲಂಕಾದಲ್ಲಿ..

ನಮ್ಮ ದೇಶದಲ್ಲಿ ಕಣ್ಣು ದಾನದ ಬಗ್ಗೆ ಜನರಲ್ಲಿ ಅರಿವು ಕಡಿಮೆ. ಜತೆಗೆ ಮೂಢನಂಬಿಕೆಯೂ ಸೇರಿ ಜನ ದೃಷ್ಟಿದಾನ ಮಾಡಲು ಹಿಂಜರಿಯುತ್ತಿದ್ದಾರೆ. ಆದರೆ ಶ್ರೀಲಂಕಾದಲ್ಲಿ ಕಣ್ಣುದಾನ ಹೆಚ್ಚು ಜನಪ್ರಿಯವಾಗಿದ್ದು, ಅಗತ್ಯವಿರುವ ಹೆಚ್ಚವರಿ ಕಣ್ಣುಗಳನ್ನು ಬೇರೆ ದೇಶಗಳಿಗೂ ನೀಡುತ್ತಿದೆ. ನಮ್ಮಲ್ಲಿಯೂ ಜನರನ್ನು ಮನವೊಲಿಸಿ ಅಂಧರ ಬಾಳಿಗೆ ಬೆಳಕಾಗುವ ಕೆಲಸ ಮಾಡಬೇಕಾಗಿದೆ. ಸರ್ಕಾರವೂ ಈ ನಿಟ್ಟಿನಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡುವ ಅಗತ್ಯವಿದೆ. ■